

ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ

ಶ್ರೀ ಶಿವರಾತ್ರೀಶ್ವರ ನಗರ, ಮೈಸೂರು 570 015



## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೇ ಜಯಂತಿ

ಹಾಗೂ

## ಅಕ್ಯಾಡೆಮಿಯ ನೂತನ ಸಮುಚ್ಚಯ ಶಿಲಾನ್ಯಾಸ

JSS ACADEMY OF HIGHER EDUCATION & RESEARCH
(DEEMED TO BE UNIVERSITY) MYSURU

**11 ಅಕ್ಟೋಬರ್ 2019 * ಶುಕ್ರವಾರ * ಸಂಜೆ 4.00**

**ಸ್ಥಳ : ವರುಣ (ಚಿಕ್ಕಹಳ್ಳಿ-ಆಯರಹಳ್ಳಿ ರಸ್ತೆ)**



**ಸರ್ವರಿಗೂ ಹಾರ್ದಿಕ ಸ್ವಾಗತ**

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು

ಸುತ್ತೂರು ಮಠವೆಂದೇ ಚಿರಪರಿಚಿತವಾಗಿರುವ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಹತ್ತು ಶತಮಾನಗಳ ಹಿಂದೆ ಸ್ಥಾಪನೆಗೊಂಡಿದೆ. ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಈ ಪರಂಪರೆಯ 23ನೆಯ ಪೀಠಾಧಿಪತಿಗಳು. 1916ರಲ್ಲಿ ಜನಿಸಿದ ಶ್ರೀಗಳವರು ಚಿಕ್ಕ ವಯಸ್ಸಿನಲ್ಲಿಯೇ, ಅಂದರೆ 12ನೆಯ ವರ್ಷದವರಿದ್ದಾಗಲೇ, ಶ್ರೀಮಠದ ಉತ್ತರಾಧಿಕಾರಿಗಳಾದರು. ಶ್ರೀಗಳು ಕೈಗೊಂಡ ಪ್ರತಿಯೊಂದು ಕಾರ್ಯವೂ ಮಾನವೀಯ ಸೇವೆಯ ಹಾದಿಯನ್ನು ವಿಸ್ತರಿಸುವ ಸಾಧನವಾಯಿತು. ಅಸಹಾಯಕ ಬಡವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಶ್ರೀಗಳು ತಮ್ಮ ಶಿಕ್ಷಣವನ್ನೇ ಕಡೆಗಣಿಸಿದರು. ಸಹಸ್ರಾರು ಗ್ರಾಮೀಣ ಮಕ್ಕಳ ಜ್ಞಾನದಾಹವನ್ನು ತಣಿಸಲು ಅವರು ಮೈಸೂರು ನಗರದಲ್ಲಿ 1941ರಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು.

ವಿದ್ಯಾರ್ಜನೆಗಾಗಿ ಅಂದು ನಗರಗಳಿಗೇ ಬರಬೇಕಾಗಿದ್ದ ಹಳ್ಳಿಯ ಮಕ್ಕಳ ಕಷ್ಟಗಳನ್ನು ನಿವಾರಿಸಲು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಬೇಕೆಂಬ ಮುನ್ನೋಟವನ್ನು ಹೊಂದಿದ್ದರು. ಜಗದ್ಗುರು ಶ್ರೀ ಶಿವರಾತೀಶ್ವರ ಮಹಾವಿದ್ಯಾಪೀಠವನ್ನು 1954ರಲ್ಲಿ ಸ್ಥಾಪಿಸಿದರು. ಇದರೊಂದಿಗೆ ಸಾಮಾಜಿಕ-ಆರ್ಥಿಕ ರಂಗಗಳಲ್ಲಿ ಹೊಸ ಸಂಚಲನವುಂಟಾಯಿತು. ಶಾಲಾ-ಕಾಲೇಜುಗಳು, ಸಂಸ್ಕೃತ ಪಾಠಶಾಲೆಗಳು ಮೈಸೂರಿನ ಸುತ್ತಮುತ್ತಲು ಪ್ರಾರಂಭವಾದವು. ಶ್ರೀಗಳವರ ದಿವ್ಯಸಂಕಲ್ಪದಂತೆ ಶಿಕ್ಷಣ ಕ್ಷೇತ್ರದ ಮಹಾನ್ ಕನಸುಗಳು ನನಸಾದುವು. ಉಚಿತ ಶಾಲೆಗಳು, ವಿದ್ಯಾರ್ಥಿನಿಲಯಗಳು, ವೃತ್ತಿಪರ ಕಾಲೇಜುಗಳು, ಕಲೆ, ಸಂಗೀತ, ಸಾಹಿತ್ಯದ ಕೇಂದ್ರಗಳು ಕಾರ್ಯನಿರ್ವಹಿಸತೊಡಗಿದುವು. ಶ್ರೀಗಳವರ ಇಹಲೋಕದ ಜೀವನ 1986ರಲ್ಲಿ ಅಂತ್ಯಗೊಂಡರೂ ವಿಶ್ವಾದ್ಯಂತ ಶ್ರೀಗಳು ಸ್ಥಾಪಿಸಿರುವ 350ಕ್ಕೂ ಹೆಚ್ಚು ಸಂಸ್ಥೆಗಳು ಅವರ ದಿವ್ಯ ಚೈತನ್ಯದ ಸಾಕ್ಷೀಪ್ರಜ್ಞೆಗಳಂತಿವೆ.

## ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ (ಪರಿಗಣಿತ ವಿಶ್ವವಿದ್ಯಾನಿಲಯ) 2008ರಲ್ಲಿ ಸ್ಥಾಪನೆಗೊಂಡಿತು. ಇದು ನ್ಯಾಕ್ ಸಂಸ್ಥೆಯಿಂದ ಎ+ ಶ್ರೇಣಿ ಪಡೆದಿದೆ. ಎನ್‌ಐಆರ್‌ಎಫ್ ಸಂಸ್ಥೆಯು ಕಳೆದ ನಾಲ್ಕು ವರ್ಷಗಳಿಂದ ಇದನ್ನು ದೇಶದ ಅತ್ಯುತ್ತಮ ಐವತ್ತು ವಿಶ್ವವಿದ್ಯಾನಿಲಯಗಳಲ್ಲಿ ಒಂದೆಂದು ಪರಿಗಣಿಸಿದೆ. ಟೈಮ್ಸ್ ಹೈಯರ್ ಎಜುಕೇಷನ್ ಸಂಸ್ಥೆಯ 2019ನೇ ಸಾಲಿನ ಸರ್ವೇಕ್ಷಣೆಯ ಪ್ರಕಾರ ಪ್ರಪಂಚದ 500 ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿ ಸ್ಥಾನ ಗಳಿಸಿದೆ.

ಶಿಕ್ಷಣದ ಕ್ಷಿತಿಜವನ್ನು ಪರಿಣಾಮಕಾರಿಯಾಗಿ ವಿಸ್ತರಿಸಿ, ಜ್ಞಾನಪ್ರಸಾರಕ್ಕೆ ಅನುವುಮಾಡಿಕೊಡುವ ಸಲುವಾಗಿ ಮೈಸೂರು-ಟಿ.ನರಸೀಪುರ ರಸ್ತೆಯ ಬಳಿ ಇರುವ ವರುಣ ಗ್ರಾಮದ ಬಳಿ ವಿಶ್ವಮಟ್ಟದ ಸೌಲಭ್ಯವುಳ್ಳ ಸಮುಚ್ಚಯ ನಿರ್ಮಿಸಲು ಉದ್ದೇಶಿಸಿದೆ.

## ಯೋಜನೆಯ ಪಕ್ಷಿನೋಟ

ಆವರಣದ ವಿಸ್ತೀರ್ಣ: 101.36 ಎಕರೆ

ನಿರ್ಮಾಣದ ವ್ಯಾಪ್ತಿ: 6,18,732.81 ಚ.ಮೀ.

**ಪ್ರಮುಖ ಅಂಶಗಳು:** ಶಿಕ್ಷಣ ಮತ್ತು ಸಂಶೋಧನಾ ಸೌಲಭ್ಯವುಳ್ಳ ಪರಿಸರಸ್ನೇಹಿ ಮತ್ತು ಇಂಧನಸಮರ್ಥ ಆವರಣ, ಕೇಂದ್ರ ಗ್ರಂಥಾಲಯ, ಸಭಾಂಗಣ, ವಸ್ತುಸಂಗ್ರಹಾಲಯ, ಸಮಾವೇಶ ಭವನ, ವಿದ್ಯಾರ್ಥಿನಿಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಕ್ರೀಡಾಸೌಲಭ್ಯಗಳು.

---

**ಸಂಜೆ 5.15 :** ಪ್ರಸಾದ

## ದಿವ್ಯ ಸಾನ್ನಿಧ್ಯ

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ನಿರಾಭಾರಿ ಚರಮೂರ್ತಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**
ಜ್ಞಾನಯೋಗಾಶ್ರಮ, ವಿಜಯಪುರ

**ನಿ.ಪ್ರ.ಸ್ವ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು**
ಶ್ರೀ ಸಿದ್ಧಗಂಗಾ ಮಠ, ತುಮಕೂರು

**ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು**
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

## ಉದ್ಘಾಟನೆ ಮತ್ತು ಶಿಲಾನ್ಯಾಸ

**ಶ್ರೀ ರಾಮ್ ನಾಥ್ ಕೋವಿಂದ್**
ಸನ್ಮಾನ್ಯ ಭಾರತದ ರಾಷ್ಟ್ರಪತಿಗಳು

## ಅಧ್ಯಕ್ಷತೆ

**ಶ್ರೀ ವಜೂಭಾಯಿ ರೂಡಭಾಯಿ ವಾಲಾ**
ಸನ್ಮಾನ್ಯ ಕರ್ನಾಟಕದ ರಾಜ್ಯಪಾಲರು

## ಕೃತಿ ಲೋಕಾರ್ಪಣೆ

**ಶ್ರೀ ಬಿ.ಎಸ್. ಯಡಿಯೂರಪ್ಪ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

## ವಿಶೇಷ ಆಹ್ವಾನಿತರು

**ಶ್ರೀ ಡಿ.ವಿ. ಸದಾನಂದಗೌಡ**
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು

**ಶ್ರೀ ವಿ. ಸೋಮಣ್ಣ**
ವಸತಿ, ರೇಷ್ಮೆ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು

**ಶ್ರೀ ವಿ. ಶ್ರೀನಿವಾಸ ಪ್ರಸಾದ್**
ಲೋಕಸಭಾ ಸದಸ್ಯರು ಹಾಗೂ ಮಾಜಿ ಸಚಿವರು

**ಡಾ. ಯತೀಂದ್ರ ಸಿದ್ದರಾಮಯ್ಯ**
ವಿಧಾನಸಭಾ ಸದಸ್ಯರು



ವಿಶೇಷ ಸೂಚನೆಗಳು

- * ಆಹ್ವಾನಪತ್ರಿಕೆಯನ್ನು ತಪ್ಪದೆ ತರಬೇಕು
- * ಒಂದು ಆಹ್ವಾನಪತ್ರಿಕೆಗೆ ಒಬ್ಬರಿಗೆ ಮಾತ್ರ ಪ್ರವೇಶ
- * ಮಧ್ಯಾಹ್ನ 3.00 ರೊಳಗೆ ತಮ್ಮ ಆಸನಗಳಲ್ಲಿ ಆಸೀನರಾಗಿರಬೇಕು
- * ಕೈಚೀಲ, ಕೊಡೆ, ಮೊಬೈಲ್ ಇತ್ಯಾದಿಗಳನ್ನು ತರುವಂತಿಲ್ಲ.
  ಒಂದು ವೇಳೆ ತಂದಲ್ಲಿ, ಸ್ವಾಗತಕಾರರ ಬಳಿ ಇಡಲು ವ್ಯವಸ್ಥೆ ಇರುತ್ತದೆ

**18 ಅಕ್ಟೋಬರ್ 2019 * ಶುಕ್ರವಾರ * ಬೆಳಗ್ಗೆ 10.00**

**ಶ್ರೀ ಸುತ್ತೂರು ಮಠ, ಚಾಮುಂಡಿ ಬೆಟ್ಟದ ಪಾದದ ರಸ್ತೆ, ಮೈಸೂರು**

- * ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಅಭಿನಂದನೆ
- * ಪ್ರತಿಭಾ ಪುರಸ್ಕಾರ, ಬಹುಮಾನ ಹಾಗೂ ವಿದ್ಯಾರ್ಥಿವೇತನ ವಿತರಣೆ




Ph: +91-821-254 8400 / 393 * email: registrar@jssuni.edu.in * www.jssuni.edu.in